# ಭಿನ್ನ ಪಾತ್ರವೇ ನಟಿಯ ಜೀವಶಕ್ತಿ

**ವನಿತಾವಾಸು**
**ಸ್ಟಾರ್ ಸುವರ್ಣದ 'ಸಂಘರ್ಷದ' ಭೈರಾದೇವಿ**

◆ **ನಿಮ್ಮ ವೃತ್ತಿ ಬದುಕಿನ ಆರಂಭದ ದಿನಗಳಿಗೆ ಹೋಲಿಸಿದರೆ ಇವತ್ತಿನ ಸಂದರ್ಭ ಹೇಗಿದೆ?**

ವ್ಯತ್ಯಾಸ... ಹಹ.. ಆಗಲೂ ಅಭಿನಯ ಮಾಡುತ್ತಿದ್ದೆ; ಈಗಲೂ ಮಾಡುತ್ತಿದ್ದೇನೆ. ಆಗ ಗೊತ್ತಿಲ್ಲದೆ ಒಂದು ಕಲಿತು ಮಾಡಿದೆ. ಈಗ ಒಂದಿಷ್ಟು ಕಲಿತು ಮಾಡುತ್ತಿದ್ದೇನೆ. ದೀರ್ಘಕಾಲ ಅನುಭವದ ಹಿನ್ನೆಲೆಯಲ್ಲಿ ಕೆಲವೊಂದು ಪಾತ್ರಗಳು ತಲೆಯಲ್ಲಿ ಏನಾದರೂ ಉಳಿದಿದ್ದರೆ, ಮತ್ತದೇ ರೀತಿಯ ಪಾತ್ರಗಳಲ್ಲಿ ನಟಿಸುವಾಗ ಏಕತಾನತೆ ಅನಿಸುತ್ತದೆ. ಮೊದಲಿದ್ದ ತಾಜಾತನವನ್ನು ಕಾಪಾಡುವ ನಿಟ್ಟಿನಲ್ಲಿ ಒಂದಿಷ್ಟು ಪ್ರಯತ್ನ ಮಾಡಬೇಕು. ಆಗಿನ ಕಾಲಕ್ಕೆ ಹೋಲಿಸಿದರೆ ನಟನೆ ಸುಧಾರಿಸಿದೆಯೇ ಹೊರತು ಬೇರೆ ಇನ್ನೇನೂ ಇಲ್ಲ.

ಅವು ತುಂಬ ಸೂಕ್ಷ್ಮ ದಿನಮಾನಗಳು. ಮಾಧ್ಯಮವೂ ತುಂಬ ಸೂಕ್ಷ್ಮವಾಗಿದ್ದವು. ಸಣ್ಣ ಟೀಕೆಗಳೂ ಗಾಸಿಗೊಳಿಸುತ್ತಿದ್ದವು. ಈಗ ಸಾಮಾಜಿಕ ಮಾಧ್ಯಮಗಳಲ್ಲಿ ಎಲ್ಲರೂ ಬರಹಗಾರರೇ ಆಗಿದ್ದಾರೆ. ಏನಾದರೂ ಬರೆಯಬಹುದು. ಆ ಸೂಕ್ಷ್ಮತೆ ಈಗ ಉಳಿದಿಲ್ಲ. ಸುದ್ದಿ ವಿಷಯದಲ್ಲಿ ಬೇಕಾಗಿರುವ ಮಾಹಿತಿ ಸರಿಯಾಗಿ ಸಿಗುತ್ತಿತ್ತು. ಈ ನಡುವೆ ಸುದ್ದಿಯ ನಡುವೆ ಫೇಕ್ ಸುದ್ದಿಗಳೂ ಸೇರುವುದರಿಂದ ನೈಜ ಸುದ್ದಿಯನ್ನು ಪರಿಷ್ಕರಿಸಬೇಕಾಗಿದೆ. ಸತ್ಯಾಸತ್ಯಗಳನ್ನು ಹುಡುಕುವ ಸಂದರ್ಭ ನಿರ್ಮಾಣವಾಗಿದೆ. ಹತ್ತು ಸತ್ಯದ ನಡುವೆ ಒಂದೇ ಒಂದು ಮಿಥ್ಯೆ ಬೆರೆತರೂ ವಿಶ್ವಾಸ ಕುಂದುತ್ತದೆ. ನಟ– ನಟಿಯರ ಖಾಸಗಿ ಜೀವನವೂ ಮನರಂಜನೆಯ ಸರಕಿನಂತೆ ಆಗಿದೆ ಎಂದು ಅನ್ನಿಸುತ್ತದೆ.

◆ **ಕಿರುತೆರೆ– ಹಿರಿತೆರೆ ಎರಡನ್ನೂ ನಿಭಾಯಿಸುತ್ತಿದ್ದೀರಿ. ನಿಮಗೇನಾದರೂ ಅಂತರ ಅನ್ನಿಸಿದೆಯಾ?**

ಅಭಿನಯ ಎರಡರಲ್ಲೂ ಒಂದೇ. ಸಿನಿಮಾದಲ್ಲಿ ಪ್ರೇಕ್ಷಕರು ಹಣ ಕೊಟ್ಟು ನಮ್ಮನ್ನು ನೋಡಲು ಟಾಕೀಸಿಗೆ ಬರುತ್ತಾರೆ. ಸೀರಿಯಲ್‌ನಲ್ಲಿ ನಾವೇ ನೇರವಾಗಿ ಅವರ ಮನೆಗೆ ಹೋಗುತ್ತೇವೆ. ಸಿನಿಮಾದಲ್ಲಿ ಅದ್ದೂರಿತನ ಮೆರೆಯುತ್ತದೆ. ಧಾರಾವಾಹಿಲ್ಲಿ ನೈಜತೆಗೆ ಹೆಚ್ಚು ಪ್ರಾಮುಖ್ಯತೆ ಇರುತ್ತದೆ. ಸಿನಿಮಾದಲ್ಲಿ ಎಷ್ಟೋ ಸಲ ಚಿತ್ರತಂಡದ ಎಲ್ಲ ಕಲಾವಿದರನ್ನು ಭೇಟಿಯಾಗಲೂ ಸಾಧ್ಯವಾಗುವುದಿಲ್ಲ. ಧಾರಾವಾಹಿಯಲ್ಲಿ ಅವರ ಮನೆಯ ಸದಸ್ಯರೇ ನಾವಾಗುತ್ತೇವೆ. ಧಾರಾವಾಹಿಯ ನಟರ ಕಷ್ಟ– ಸುಖಗಳಿಗೆ ಮಿಡಿಯುತ್ತಾರೆ. ಎಲ್ಲಾದರೂ ಭೇಟಿಯಾದರೆ 'ನೀವು ಎಷ್ಟು ತೊಂದರೆ ಅನುಭವಿಸುತ್ತಿದ್ದೀರಿ' ಎಂದು ಸಹಾನುಭೂತಿ ತೋರಿಸುತ್ತಾರೆ. ಆದರೂ ಅದೆಲ್ಲ ಕೆಲವೇ ದಿನ. ಧಾರಾವಾಹಿ ಮುಗಿದ ತಕ್ಷಣ ಅದನ್ನು ಮರೆತು ಬಿಡುತ್ತಾರೆ. ಅವರ ಸ್ಮರಣೆಯಲ್ಲಿ ದೀರ್ಘ ಕಾಲ ಉಳಿಯುವುದು ಸಿನಿಮಾ ಮಾತ್ರ. 1987ರಲ್ಲಿ ನಾನು ಬಣ್ಣ ಹಚ್ಚಿದ್ದು, ಆಗ ನಿರ್ವಹಿಸಿದ 'ಆಗುಂತಕ', 'ತರ್ಕ' ಸಿನಿಮಾಗಳ ಬಗ್ಗೆ ಈಗಲೂ ಮಾತನಾಡುತ್ತಾರೆ.

◆ **ನಿಮ್ಮಲ್ಲಿ ಇದ್ದ ರಾಜಕೀಯ ಆಸಕ್ತಿ ಕುಂದಿದ್ದು ಏಕೆ?**

ನಾಲ್ಕೈದು ವರ್ಷದ ಹಿಂದೆ ಪ್ರಚಾರದಲ್ಲಿಯೂ ಭಾಗವಹಿಸಿದೆ. ಅಧಿಕಾರ ನಿರ್ವಹಿಸುವ ಸಾಮರ್ಥ್ಯ ನನ್ನಲ್ಲಿದೆ. ಆದರೆ ನುಗ್ಗಿ ಅದನ್ನು ಹಿಡಿಯುವ ಮನಃಸ್ಥಿತಿ ಇಲ್ಲ. ಅಂತಹ ಸಾಹಸವೂ ನನ್ನಿಂದ ಸಾಧ್ಯವಿಲ್ಲ. ಸಕ್ರಿಯ ರಾಜಕೀಯ ವ್ಯವಸ್ಥೆಯಲ್ಲಿ ಸ್ವಲ್ಪ ಕಠಿಣ ಮನಸ್ಸು ಇರಬೇಕು. ಸಮಾಜವನ್ನು ಯಾರೆಲ್ಲ ಸುಧಾರಿಸುವ ಕೆಲಸ ಮಾಡಿದ್ದಾರೋ ಅವರನ್ನು ಗೌರವಿಸುತ್ತೇನೆ. ಮತ್ತೊಂದು ಸಂಗತಿ ಎಂದರೆ, ನನಗೆ ಸುಳ್ಳು ಹೇಳಲು ಆಗುವುದಿಲ್ಲ. ಮನಸ್ಸಿನಲ್ಲಿ ಇರುವುದನ್ನು ನೇರವಾಗಿ ಹೇಳಿಬಿಡುತ್ತೇನೆ. ಕೆಲವೊಮ್ಮೆ ಅದು ಅಸೂಕ್ಷ್ಮ ಎಂದು ಅನ್ನಿಸುವ ಅಪಾಯ ಇರುತ್ತದೆ. ಯಾರಿಗಾದರೂ ನೋವನ್ನೋ ತೊಂದರೆಯನ್ನೋ ಮಾಡಬೇಕು ಎನ್ನುವ ಉದ್ದೇಶ ಇಲ್ಲದಿದ್ದರೂ ಸತ್ಯ, ಅಂತಹ ನಂಜನ್ನು ಉಂಟುಮಾಡಿಬಿಡುತ್ತದೆ. ಸತ್ಯವನ್ನು ಹೇಳುವ ಮುಗ್ಧತೆ ಕೂಡ ಒಂದಿಷ್ಟು ಯಡವಟ್ಟು ಮಾಡುತ್ತದೆ. ಹೀಗಾಗಿ ತೆರೆಯ ಮೂಲಕವೇ ಸಾರ್ವಜನಿಕ ಬದುಕನ್ನು ಅನುಭವಿಸುತ್ತೇನೆ.

◆ **ನಿಮ್ಮನ್ನು ನಿರಂತರ ಕಾಡುವ ಪಾತ್ರಗಳು....**

'ಆಗುಂತಕ', 'ಕಾಡಿನ ಬೆಂಕಿ', 'ತರ್ಕ' ಇವತ್ತೂ ಕಾಡುತ್ತವೆ. ನಟಿಸುವ ಹೊಸತರಲ್ಲಿ ತೆರೆಯ ಮೇಲೆ ಹೇಗೆ ಬರುತ್ತದೆ ಎಂಬ ಅಂದಾಜು ಸಿಗುತ್ತಿರಲಿಲ್ಲ. ಹೇಳಿದಂತೆ ನಟಿಸುತ್ತಾ ಕಲಿಯುತ್ತಾ ಬಂದಿದ್ದೇವೆ. ಈಗ ಹೀಗಾಗಬಹುದು ಎಂದು ನಿರೀಕ್ಷಿಸಬಹುದು. ಧಾರಾವಾಹಿಯಲ್ಲಿ ಹೇಳುವುದಾದರೆ 'ಮನೆಯೊಂದು ಮೂರು ಬಾಗಿಲು' ಏಳು ವರ್ಷ ಪ್ರಸಾರವಾಯಿತು. ಆ ಪಾತ್ರ ಜನಜನಿತವಾಗಿತ್ತು. ಸಾಮಾನ್ಯವಾಗಿ ಧಾರಾವಾಹಿಗಳಲ್ಲಿ ಸ್ತ್ರೀ ಪ್ರಧಾನ ಕಥೆ ಇರುತ್ತವೆ. ಬಹುತೇಕ ಪ್ರಧಾನ ಪಾತ್ರಗಳನ್ನೇ ನಿರ್ವಹಿಸಿದ್ದೇನೆ. ಸಹಜ ಕಥೆಗಳಿಗಿಂತ ಭಿನ್ನ ಕಥೆಯನ್ನು ನೀಡಿದರೆ ಅಭಿನಯಿಸುವ ಮಜವೇ ಬೇರೆಯಾಗಿರುತ್ತದೆ. ಕಲಾವಿದೆಯಾಗಿ ಎಲ್ಲ ಪಾತ್ರಗಳನ್ನು ಮಾಡುತ್ತೇನೆ. ಭಿನ್ನ ಭಿನ್ನ ಪಾತ್ರ ನಿರ್ವಹಣೆ ಅದರಲ್ಲೂ ಸವಾಲು ನೀಡಿದರೆ ಎಂದೆಂದೂ ಸ್ಮರಣೀಯವಾಗಿ ಉಳಿಯುತ್ತವೆ. ಒಂದು ಸಿನಿಮಾದಲ್ಲಿ 10 ನಿಮಿಷದ ಪಾತ್ರ ನಿರ್ವಹಿಸಿದರೂ ನಾನು ನನ್ನ ಪಾತ್ರಕ್ಕೆ ನ್ಯಾಯ ಕೊಟ್ಟಿದ್ದೇನಾ ಎನ್ನುವುದು ಮುಖ್ಯ ಆಗುತ್ತದೆ. ಒಟ್ಟಾರೆ ಸಿನಿಮಾಕ್ಕಿಂತ ನನ್ನ ಪಾತ್ರಕ್ಕೆ ಸೀಮಿತಗೊಳಿಸಿ ಚೆನ್ನಾಗಿ ಮಾಡಿದ್ದೇನಾ ಎಂದು ನೋಡುತ್ತೇನೆ.

◆ **ಸಂಘರ್ಷ ಭೈರಾದೇವಿ ಬಗ್ಗೆ ಹೇಳುವುದಾದರೆ...**

ಸಂಘರ್ಷದಲ್ಲಿ ಪ್ರಯೋಗಾತ್ಮಕ ಪಾತ್ರ. ಭಿನ್ನ ಪಾತ್ರ ಸಿಗಬೇಕು ಎನ್ನುವುದು ಎಲ್ಲರಿಗೂ ಇರುವ ಆಸೆ. ಅದೃಷ್ಟ ಎಂದರೆ ಅಂತಹ ಅನೇಕ ಅವಕಾಶಗಳು ನನಗೆ ಸಿಕ್ಕಿವೆ. ಇಲ್ಲೂ ಅದ್ಭುತವಾದ ಪಾತ್ರ ಸಿಕ್ಕಿದೆ. ನೆಗೆಟಿವ್ ಪಾತ್ರವಾದರೂ ಒಟ್ಟಾರೆ ಆಶಯ ಒಳ್ಳೆಯದಿದೆ. ಧಾರಾವಾಹಿ ಪ್ರೊಮೊ ಗಮನಿಸಿಯೇ ರಸ್ತೆಯಲ್ಲಿ ಒಬ್ಬರು 'ಭೈರಾದೇವಿ ಗುಡ್ ಮಾರ್ನಿಂಗ್' ಎಂದು ಹೇಳಿದ್ದರು.



■ **ರಾಘವೇಂದ್ರ ಕೆ.**